ಶ್ರೀ ಜೆ. ಎಸ್. ದೇಶಮುಖ್ (ವಿದ್ಯುಚ್ಛಕ್ತಿ ಮಂತ್ರಿಗಳು).—ಮಾನ್ಯ ಉಪಾಧ್ಯಕ್ಷರೇ ಈಗತಾನೆ ನೋಟೀಸ್ ಬಂದಿದೆ. ಆದಷ್ಟು ಪರಿಶೀಲನೆ ಮಾಡಿ ಉತ್ತರವನ್ನು ತರಿಸಿಕೊಡತಕ್ಕಂಥ ಪ್ರಯತ್ನ ಮಾಡುತ್ತೇನೆ.

ಶ್ರೀಮತಿ ಮುನೀರಮ್ಮ ಮಧ್ವರಾಜ್.— ಮಾನ್ಯ ಅಧ್ಯಕ್ಷರೇ ಸಿಳಿಗರ ನಿಯಮದ ಮೇರೆಗೆ ಹಲವಾರು ಪ್ರಶ್ನೆಗಳನ್ನು ಕೇಳಿರುತ್ತೇನೆ. ಸರ್ಕಾರದಿಂದ ಸಮರ್ಪಕವಾದ ಉತ್ತರ ಒಂದಕ್ಕೂ ಸಿಕ್ಕಿಲ್ಲ. ವಿದ್ಯುತ್ ಸರಬರಾಜಿನ ಬಗ್ಗೆ ಆಗುತ್ತಿರುವ ತೊಂದರೆಗಳನ್ನು ವಿವರಿಸಿರಂತ್ತೇನೆ. ದಯವಿಟ್ಟು ಈಗ ಲಾದರೂ ಸರಿಪಡಿಸಿ ವ್ಯವಸ್ಥೆಗೊಳಿಸುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಜೆ. ಎಸ್. ದೇಶಮುಖ್.— ವ್ಯವಸ್ಥೆಗೊಳಿಸುತ್ತೇನೆ.

(9) ಉತ್ತರ ಕನ್ನಡ ಜಿಲ್ಲೆಯ ಡಿ.ಡಿ.ಪಿ.ಐ.ನವರು ಕಾನೂನು ಬಾಹಿರವಾಗಿ ವರ್ಗಾವಣೆ ಮಾಡಿರುವ ಬಗ್ಗೆ.

ಶ್ರೀ ಆರ್. ಎನ್. ನಾಯಕ್.— ಉತ್ತರ ಕನ್ನಡ ಜಿಲ್ಲೆಯ ಡಿ.ಡಿ.ಪಿ.ಐ.ರವರು ಕಾನೂನು ಬಾಹಿರವಾಗಿ ವರ್ಗಾವಣೆಗಳನ್ನು ಮಾಡಿದ್ದಲ್ಲದೇ ತಾಲ್ಲೂಕುಗಳಲ್ಲಿ ಕ್ಯಾಸ್ ಡೆಪ್ಯುಟೇಷನ್ ಸಹ ಮಾಡಿದ್ದಾರೆ. ಕ್ಯಾಸ್ ಡೆಪ್ಯುಟೇಷನ್ ಅರ್ಥ ಅವಧಿ ಪೂರ್ವ–ವರ್ಗ ಎಂತಲೇ ಆಗುತ್ತದೆ. ಕ್ಯಾಸ್ ಡೆಪ್ಯುಟೇಷನ್ ಮಾಡಲು ಅವರಿಗೆ ಮತ್ತು ತಾಲ್ಲೂಕಿನಲ್ಲಿರುವ ಈ ಜನಗಳಿಗೆ ಅಧಿಕಾರವೇ ಇರುವುದಿಲ್ಲ. ಮೇಲೆ ಹೇಳಿದ ರೀತಿಯಲ್ಲಿ ಕಾನೂನು ಬಾಹಿರವಾಗಿ ವರ್ತಿಸಿ ಶಿಕ್ಷಕರಿಂದ ಹಣ ಸಂಗ್ರಹಿಸಿದ್ದಾರೆಂತ ಜನ ಆಡಿಕೊಳ್ಳುತ್ತಾರೆ. ಈ ಡಿ.ಡಿ.ಪಿ.ಐ.ರವರ ಮೇಲೆ ಸಾಕಷ್ಟು ಆಪಾದನೆಗಳಿದ್ದು ಸದನದಲ್ಲಿಯೇ ಅವುಗಳನ್ನು ಎತ್ತಲಾಗಿದೆ. ಹೀಗಿದ್ದರೂ ಅವರ ಮೇಲೆ ಏನು ಕ್ರಮಕೈಕೊಳ್ಳದಿರುವುದನ್ನು ನೋಡಿದರೆ ಸರಕಾರದಲ್ಲಿ ಯಾವುದೋ ಕಾಣದ ಕೈ ಅವರ ದುರ್ವರ್ತನೆಯನ್ನು ರಕ್ಷಿಸಲು ಪ್ರಯತ್ನ ನಡೆಸಿರುವುದು ಸ್ಪಷ್ಟವಾಗುತ್ತದೆ. ಅವಕಾಶ ಕೊಟ್ಟಲ್ಲಿ ಅವರ ಕಾನೂನು ಬಾಹಿರ ಕೆಲಸಗಳನ್ನು ಸದನದ ಮುಂದೆಯೇ ಇಡಲು ನಾನು ಸಿದ್ಧನಿದ್ದೇನೆ. ಕಾರಣ ತಕ್ಷಣ ಸೂಕ್ತ ಕ್ರಮ ಕೈಕೊಂಡು ಸೂಕ್ತ ಹೇಳಿಕೆ ನೀಡುವ ಬಗ್ಗೆ ಸರಕಾರದ ಗಮನ ಸೆಳೆಯುತ್ತೇನೆ.

ಶ್ರೀ ಎಚ್. ಜಿ. ಗೋವಿಂದೇಗೌಡ (ರಾಜ್ಯ ಶಿಕ್ಷಣ ಸಚಿವರು).— ಮಾನ್ಯ ಉಪಾಧ್ಯಕ್ಷರೆ ಮಾನ್ಯ ಸದಸ್ಯರು ಈಗ ತಾನೇ ವಿಷಯವನ್ನು ಸರ್ಕಾರದ ಗಮನಕ್ಕೆ ತಂದಿರುತ್ತಾರೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸಂಬಂಧಪಟ್ಟ ಮಂತ್ರಿಗಳಿಗೆ ಹೇಳುತ್ತೇನೆ.

ಹಳ್ಳಿಗಳಲ್ಲಿರುವ 70 ವರ್ಷಕ್ಕೆ ಮೇಲ್ಪಟ್ಟಿರುವ ರೈತರಿಗೆ ವೃದ್ಧಾಪ್ಯ ವೇತನ ನೀಡುವ ಬಗ್ಗೆ.

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ)— ಸನ್ಮಾನ್ಯ ಉಪಾಧ್ಯಕ್ಷರೇ, ಹಳ್ಳಿಗಳಲ್ಲಿರುವ ರೈತರು ಜೀವಮಾನವಿಡೀ ಗದ್ದೆ ಹೊಲಗಳಲ್ಲಿ ದುಡಿದು ಆಹಾರ ಒದಗಿಸುತ್ತಿರುವವರು. ಇಂತಹ ಕೃಷಿಕರು, ರೈತರು ಮುಪ್ಪನ್ನು ಕಾಣುವಾಗ ದಿಕ್ಕಿಲ್ಲದೆ ಇರುತ್ತಾರೆ. ಗಂಡು ಮಕ್ಕಳಿದ್ದರೆ ಮದುವೆಯಾಗಿ ಬೇರೆ ಹೋಗುತ್ತಾರೆ. ಹೆಣ್ಣು ಮಕ್ಕಳು ಇದ್ದಲ್ಲಿ ಮದುವೆಯಾಗಿ ಗಂಡನ ಮನೆಗೆ ಹೋಗುತ್ತಾರೆ. ಇಂತಹ 70 ವರ್ಷದ ಮುಪ್ಪಿನಲ್ಲಿ ಕೃಷಿ ರೈತರು ತುಂಬಾ ಕಷ್ಟಕ್ಕೆ ಒಳಗಾಗುತ್ತಾರೆ. ಆದಕಾರಣ ಸರಕಾರದವರು 70 ವರ್ಷವಾದ ರೈತರನ್ನು ಹಳ್ಳಿಗಳಲ್ಲಿ ಗುರುತಿಸಿ ಅವರಿಗೆ ''ಪೆನ್‌ಷನ್'' ಕೊಡುವುದು ಅಗತ್ಯದ ವಿಚಾರವಾಗಿರುತ್ತದೆ. ಈ ಕುರಿತು ಕೃಷಿ ಸಚಿವರ ಗಮನವನ್ನು ಸೆಳೆಯುಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).— ಮಾನ್ಯ ಅಧ್ಯಕ್ಷರೇ ಇದು ಒಂದು ಪಾಲಿಸಿ ವಿಷಯಕ್ಕೆ ಸಂಬಂಧಪಟ್ಟದ್ದಾಗಿರುತ್ತದೆ. ಇದನ್ನು ವಿಚಾರ ಮಾಡುತ್ತೇನೆಂದು ಇಷ್ಟು ಮಾತ್ರ ಈ ಸಮಯದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ೬೫ ವರ್ಷ ವಯಸ್ಸಿನವರೆಲ್ಲರಿಗೂ ಪೆನ್‌ಷನ್ ಕೊಡತಕ್ಕಂಥ ವ್ಯವಸ್ಥೆ ಇದೆ. ಕೂಲಿಗಾರರಿಗೂ ಪೆನ್‌ಷನ್ ಕೊಡತಕ್ಕಂಥ ವ್ಯವಸ್ಥೆ ಇದೆ. ಈ ವ್ಯವಸ್ಥೆಯ ಪ್ರಕಾರ [illegible]

ಕಾರ್ಮಿಕರಿಗೂ ಪೆನ್‌ಷನ್ ಕೊಡುವ ಬಗ್ಗೆ ಕೇರಳದಲ್ಲಿ ಇಂಥ ಒಂದು ಕಾನೂನು ಇದೆ ಎಂದು ತಿಳಿದು ಕೊಂಡಿದ್ದೇನೆ. ಸರ್ಕಾರ ಇದರ ಬಗ್ಗೆ ಯೋಚನೆ ಮಾಡಿ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಈಗಿರತಕ್ಕಂಥ ಕಾನೂನು ಪ್ರಾಪ್ತಿಯಲ್ಲಿ ೬೫ ವರ್ಷ ವಯಸ್ಸಾದವರೆಲ್ಲರಿಗೂ ಪೆನ್‌ಷನ್ ಕೊಡತಕ್ಕಂಥ ವ್ಯವಸ್ಥೆ ಇದೆ ಎಂದು ಹೇಳುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಕೃಷಿ ರೈತರಿಗೂ ಪೆನ್‌ಷನ್ ಕೊಡುವ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಎಲ್ಲರಿಗೂ ಅಂದರೆ ಯಾರಿಗೆ ಬೇಕಾದರೂ ಕೊಡುವುದಕ್ಕೆ ಅವಕಾಶ ಇದೆ. ಆದರೆ ಮಾನ್ಯ ಇದಿನಬ್ಬನವರು ಕೇಳತಕ್ಕಂಥ ಪ್ರಶ್ನೆಗೆ ಪ್ರತ್ಯೇಕವಾದ ವ್ಯವಸ್ಥೆ. ಮೂಡ ಬೇಕೆಂದು ಕೇಳಿದ್ದಾರೆ. ಕೇರಳ ಮಾದರಿಯಲ್ಲಿ ಮಾಡಬೇಕೆಂದು ಹೇಳಿದರೆ ಅದು ಒಂದು ಪಾಲಿಸಿಗೆ ಸಂಬಂಧಪಟ್ಟ ವಿಚಾರವಾಗಿರುವುದರಿಂದ ಅದನ್ನು ವಿಚಾರ ಮಾಡುತ್ತೇನೆಂದು ಹೇಳುತ್ತೇನೆ. ಕಾನೂನು ವ್ಯಾಪ್ತಿಯಲ್ಲಿ ೬೫ ವರ್ಷಕ್ಕೆ ಮೇಲ್ಪಟ್ಟವರೆಲ್ಲರಿಗೂ ಪೆನ್‌ಷನ್ ಕೊಡುವುದಕ್ಕೆ ಅವಕಾಶವಿದೆ.

XI ಹುಕ್ಕೇರಿ ತಾಲ್ಲೂಕಿನಲ್ಲಿ ಕೆರೆಗಳನ್ನು ಕಟ್ಟಿಸುವ ಬಗ್ಗೆ

ಶ್ರೀ ಮಲ್ಲಾರಿಗೌಡ. ಎಸ್. ಪಾಟೀಲ್.— ಮಾನ್ಯ ಅಧ್ಯಕ್ಷರೇ, ಹುಕ್ಕೇರಿ ತಾಲ್ಲೂಕಿನ ಕೆಳಕಂಡ ಕೆರೆಗಳ ನಿರ್ಮಾಣಕ್ಕೆ ಕಳೆದವರ್ಷ ಸದನದಲ್ಲಿ ಬಿಡುಗಡೆ ಮಾಡಿದ ಟೋಕನ್ ಗ್ರಾಂಟ್ ಕಕ್ಷೆಯಲ್ಲಿ ಬಂದಿದ್ದರೂ ಈ ವರ್ಷ ಸಾಕಷ್ಟು ಬರಗಾಲದಿಂದ ಜನರು ತೊಂದರೆ ಅನುಭವಿಸುತ್ತಿದ್ದು ನನ್ನ ಮತದಾರ ಕ್ಷೇತ್ರದ (೧) ಅಂಕಲೆ (೨) ಬಾಡವಾಡಿ (೩) ಮಸರಗುಪ್ಪಿ (೪) ರಾಸಿಂಗ್ ಹಾಗೂ (೫) ಮೊಚರಿ ಯಾತ ನೀರಾವರಿ ಕೆಲಸಕ್ಕಾಗಿ ಪ್ರತಿ ಕೆಲಸಕ್ಕೆ ಬೇಕಾಗುವ ಹಣವನ್ನು ಬಿಡುಗಡೆಮಾಡಿ ಗಡಿ ಭಾಗದ ಈ ಕೆಲಸಕ್ಕೆ ಆದ್ಯತೆ ಕೊಡದಿದ್ದಲ್ಲಿ ಜನ ಬೇರೆ ಕಡೆಗೆ ವಲಸೆ ಹೋಗುವ ಸಂಭವಿದ್ದು ಲೋಕೋಪಯೋಗಿ ಮಂತ್ರಿಗಳು ಈ ಕೆಲಸಕ್ಕಾಗಿ ಹಣವನ್ನು ತೀವ್ರವಾಗಿ ಬಿಡುಗಡೆ ಮಾಡಿ ಕೆಲಸವನ್ನು ಪ್ರಾರಂಭಿಸ ಬೇಕೆಂದು ಸರಕಾರದವರನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).— ಮಾನ್ಯ ಸದಸ್ಯರು ಬರಗಾಲ ಪ್ರದೇಶಗಳಲ್ಲಿ ಬರಗಾಲ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆನ್ನುವ ವಿಚಾರವನ್ನು ಹೇಳಿದ್ದಾರೆ. ಮಾನ್ಯ ಲೋಕೋಪಯೋಗಿ ಮಂತ್ರಿಗಳ ಗಮನಕ್ಕೆ ಈ ವಿಚಾರವನ್ನು ತಂದು ಆದಷ್ಟು ಬೇಗ ಮಾಡಲಿಕ್ಕೆ ಹೇಳುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಬರಗಾಲ ಪೀಡಿತ ಪ್ರದೇಶಗಳಿಂದು ಮಾನ್ಯ ಸಚಿವರ ಗಮನಕ್ಕೆ ಈಗಾಗಲೇ ಬಂದಿದೆ. ಆದ್ದರಿಂದ ಆಲ್ಲಿ ಕಾಮಗಾರಿ ಕೆಲಸಗಳನ್ನು ತೆಗೆದುಕೊಳ್ಳಲು ಹಣ ವನ್ನು ಬಿಡುಗಡೆ ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಲೋಕೋಪಯೋಗಿ ಸಚಿವರಿಗೆ ತಿಳಿಸುತ್ತೇನೆ.

ಉಪಾಧ್ಯಕ್ಷರು.—ಈಗ ೩೫ಕ್ಕೆ ನಿಯಮದಮೇರೆಗೆ ಚರ್ಚೆ ಮುಗಿದಿರುತ್ತದೆ. ಮುಂದೆ ವಿಶ್ವೇಯ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಲಾಗುತ್ತದೆ.

ಶ್ರೀ ಪಟವಂಕಿ ರತ್ನಾಕರ್.—ಯಾವ ಆಧಾರದಮೇಲೆ ನಿಯಮ ೩೫ಕ್ಕೆ ಹತ್ತು ಪ್ರಶ್ನೆ ಗಳನ್ನು ಸೆಲೆಕ್ಟ್ ಮಾಡುತ್ತೀರಿ?

ಉಪಾಧ್ಯಕ್ಷರು.—ಹತ್ತೇ ಬಂದರೆ ಎಲ್ಲವೂ ಬರುತ್ತದೆ. ಆದರೆ ಹತ್ತಕ್ಕಿಂತ ಜಾಸ್ತಿ ಇದ್ದರೆ ಬ್ಯಾಲೆಟ್ ಪದ್ಧತಿ ಅನುಸರಿಸುತ್ತೇವೆ. ಇಲ್ಲಿ ಅದೃಷ್ಟ ಕೂಡ ಬೇಕಾಗುತ್ತದೆ. ಇಂಥಾದ್ದೇ ಬರುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಮೊದಲು ಕೊಟ್ಟಿದ್ದು ಕೂಡ ಬಾರದೇ ಇರಬಹುದು.

ಶ್ರೀ ಎಸ್. ಬಂಗಾರಪ್ಪ.—ನಾನು ಕೂಡ ಕಳಿಸಿಕೊಟ್ಟಿದ್ದೆ. ಆದು ಕೂಡ ಬರಲಿಲ್ಲ. ಎಲ್ಲಿ ಹೋಯಿತು ಆದು? ಇಲ್ಲಿ ಕೆಲವು ಮಾತ್ರ ಬಂದು ಉಳಿದದ್ದು ಏಕೆ ಬರುವುದಿಲ್ಲ ಎನ್ನುವ ವಿಚಾರ. ಆದರ ಜೊತೆಗೆ ಸದನ ಪ್ರಾರಂಭವಾದಾಗಿನಿಂದ ಪದೇಪದೇ ಹೇಳಲಿಕ್ಕೆ ನಮಗೆ ಆಸಕ್ತಿ ಇಲ್ಲ. ತುಂಬಾ ಪೆಂಡಿಂಗ್ ಹಾಗೆಯೇ ಉಳಿದಿದೆ. ನಾವು ಕೇಳುತ್ತಲೇ ಇದ್ದೇವೆ, ಪರಿಶೀಲನೆ ಮಾಡಿ ಉತ್ತರ ಕೊಡುತ್ತೇವೆ ಎಂದು ಹೇಳುತ್ತಲೇ ಇದ್ದಾರೆ. ಮುಂದಿನ ತಿಂಗಳು ಹತ್ತನೇ ತಾರೀಕಿಗೆ ಅಧಿವೇಶನ ಮುಕ್ತಾಯ ಆಗಬಹುದು. ಇಲ್ಲಿಯವರೆಗೆ ಪ್ರಸ್ತಾಪ ಮಾಡಿರತಕ್ಕಂಥ ವಿಷಯಗಳು